
ಚವಲಾರ ಅವರ ಆತ್ಮಕಥನ ಆ ಕಾಲದಲ್ಲಿಯೇ ಅಪರೂಪಕ್ಕೆ ಅಪರೂಪ ಎಂಬಂತೆ ಉದ್ಯೋಗ ಪಡೆದ, ಅದರಲ್ಲಿಯೂ ಉನ್ನತಿಯನ್ನು ಪಡೆಯಲು ಹೆಣಗಿದ, ಅದಕ್ಕೆ ಪರಿಸರ ತುಸುವೂ ಸ್ಪಂದಿಸದೇ ಅವರನ್ನು ಪಕ್ಕಕ್ಕೆ ಸರಿಸಲು ಕೊನೆಯವರೆಗೂ ಕಾಡಿದ್ದನ್ನು ನೋವಿನಿಂದಲೇ ಹಂಚಿಕೊಳ್ಳುತ್ತಾರೆ. ಈ ಮಾದರಿಯ ಆತ್ಮಕಥನಗಳನ್ನು ಹೊಸಿಲು ದಾಟುತ್ತಿದ್ದ ಹೆಣ್ಣಿನ ಕಥನಗಳೆಂದು ನೋಡಬಹುದು. ಜೀವನವು ಹೊಸ್ತಿಲಿನ ಒಳಗಿದೆಯೋ ಹೊರಗಿದೆಯೋ, ಯಾವುದು ತನ್ನ ಆಯ್ಕೆಯಾಗಬೇಕು ಎನ್ನುವುದನ್ನು ನಿರ್ಧರಿಸಲು ಸಾಧ್ಯವಾಗದ, ಹಾದಾಡುವ ಹೊಸ್ತಿಲಲಿ ಹೊಯ್ದಾಡುವ ದೀಪದಂತೆ ಹೆಣ್ಣು ಹೊಯ್ದಾಡಿದ ಈ ಕಾಲದ ಕಥನಗಳು ಸರಳ, ಸ್ವಮರುಕದ ನಿರೂಪಣೆಗಳಂತೆ ಕಂಡರೂ ಅವು ಬದಲಾಗುತ್ತಿದ್ದ ಹೆಣ್ಣಿನ ಮತ್ತು ಅವರಂತೆಯೇ ಹೊಯ್ದಾಡಿದ ಗಂಡು ಮತ್ತು ಪರಿಸರದ ಚಿತ್ರಗಳನ್ನೂ ನಮಗೆ ತೋರಿಸುತ್ತವೆ. ಶಾರದಾ ಹೆಮ್ಮಿಗೆಯವರ 'ಬದುಕು ಬರಹ'ದಂತಹ ಕೃತಿಗಳು ಹೆಣ್ಣಿನ ಧೀಶಕ್ತಿಯ ಪ್ರತೀಕಗಳಾಗಿ ಇತರರಿಗೆ ಸಾಧ್ಯವಾಗದ ಸ್ಪಷ್ಟತೆಯಲ್ಲಿ ಬದುಕನ್ನು ಅವರು ಎದುರಾದ ಅಪರೂಪದ ಬದುಕಾಗಿದೆ.




ಮೂರನೆಯ 'ಅಸ್ಮಿತೆ'ಯ ಘಟ್ಟವು ಸಹಜವಾಗಿಯೇ ಅರಿವಿನ ಹಿಂಸೆಯ ಕಾಲವಾಗಿತ್ತು. ಮನೆಯೊಳಗೂ ಇರಲಾರದ ಹೊರಗೆ ಹೋಗಿ ನಿಭಾಯಿಸಲು ಕಡು ಕಷ್ಟಪಡುವ ಸಂದರ್ಭ ಇದು. ಇಲ್ಲಿ ಒಳಗೂ ಹೊರಗೂ ಎನ್ನುವುದು ಕೇವಲ ಅವರ ಶಿಕ್ಷಣ ಮತ್ತು ಉದ್ಯೋಗಗಳನ್ನು ಕುರಿತ ಸಂಗತಿಯಲ್ಲ. ಅದು ಹೆಣ್ಣು ತನ್ನ ಬುದ್ಧಿಭಾವಗಳನ್ನು, ಖಾಸಗಿ ಮತ್ತು ಸಾರ್ವಜನಿಕ ಬದುಕುಗಳನ್ನು ಹೆಣೆಯಲು ಹರಸಾಹಸ ಮಾಡಿದ ಸನ್ನಿವೇಶವೂ ಹೌದು. ಆದ್ದರಿಂದಲೇ ಈ ಸಂದರ್ಭದ ಆತ್ಮಕಥನಗಳಲ್ಲಿ ಅಪಾರ ಉದ್ವೇಗ, ದ್ವಂದ್ವ ಮತ್ತು ಅಸ್ಪಷ್ಟತೆಗಳು ಕಾಣಿಸುತ್ತವೆ. ದಿಕ್ಕುಗಾಣದ ಹೊತ್ತಿನಲ್ಲಿ ಕಂಡವರನ್ನೆಲ್ಲ ಅಪರಾಧಿಗಳಾಗಿಸುವ, ಹೊಣೆಗಾರರಾಗಿಸುವ ಪ್ರಯತ್ನಗಳನ್ನೂ ನಾವಿಲ್ಲಿ ನೋಡುತ್ತೇವೆ. ಮತ್ತೆ ಕೆಲವೊಮ್ಮೆ ಜಾಣ ಕುರುಡು ಮತ್ತು ಜಾಣ ಕಿವುಡರಾಗಿ ಇವರು ವರ್ತಿಸುವುದನ್ನೂ ಕಾಣುತ್ತೇವೆ. ಇಲ್ಲಿನ ಮುಖ್ಯ ಸವಾಲೆಂದರೆ, 'ಆಯ್ಕೆಯ ಬದುಕ'ನ್ನು ಕಟ್ಟಿಕೊಳ್ಳಲು ನಡೆಸಿದ ಹೋರಾಟ. ಇಷ್ಟವಿಲ್ಲದ ಮದುವೆಯೋ, ಕಷ್ಟದ ದಾಂಪತ್ಯವೋ, ಮಿಕ್ಕು ಮೀರಿದ ಸೆಳೆತಗಳೋ, ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಬಂಡೇಳಬೇಕೆನ್ನುವ ಸಹಜ ತುಡಿತವೋ ಎಲ್ಲವೂ ಸೇರಿ ಇವರನ್ನು ವೀರ ಮಹಿಳೆಯರ ಹಾದಿಗೆ ಕರೆದೊಯ್ದಿತು. ಆದರೆ, ಆ ಪ್ರಯಾಣವನ್ನು ನಡೆದು ಮುಗಿಸಿದವರು ಕೆಲವರು ಮಾತ್ರ. ಅನೇಕರು ನಡುದಾರಿಯಲ್ಲಿಯೇ ಯೂ ಟರ್ನ್ ಮಾಡಿದರು. ಕಟ್ಟೆಯ ಕಲ್ಲು ಕಟ್ಟೆಗೆ ಕೂತಿತು ಎನ್ನುವ ಸಮಾಧಾನದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರೂ ನಿರಾಳರಾಗಲು ತವಕಿಸಿದರು. ಇನ್ನೂ ಕೆಲವರು ಇದನ್ನು ಎದುರಿಸಲು ಇನ್ನೊಂದು ದಾರಿ ಹಿಡಿದರು. ಬಲವಾದ ಗಂಡಾಳಿಕೆಯೇ ಇದಕ್ಕೆಲ್ಲ ಕಾರಣ ಎಂದು ಅದರ ಮೇಲೆ ಆರೋಪ ಪಟ್ಟಿಯನ್ನು ಹೊರಿಸುವಲ್ಲಿ ಮಗ್ನರಾದರು. ಆ ಕಾಲದ ಅನೇಕ ಆತ್ಮಕಥೆಗಳ ಧಾಟಿ ಇದೇ ಆಗಿದೆ. ತನ್ನ ಬದುಕಿನ ಸಮಸ್ಯೆಗಳಿಗೆಲ್ಲ ಗಂಡೇ ಕಾರಣ ಎನ್ನುವುದನ್ನು ಕೇಂದ್ರವಾಗಿ ಹೊಂದಿರುವ ಆತ್ಮಕಥನಗಳ ಓದು ಸಂಕ್ರಮಣ ಘಟ್ಟದ ಸಂಕಟವನ್ನು, ಅಸಹಾಯಕತೆಯನ್ನು